**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 31/2015 ಅಸಾ.7**

**ಚಾಸಾ.7**

| | | |
|---|---|---|
| ಸಾಕ್ಷಿದಾರರ ಹೆಸರು | - | ಚೇತನ್ ಶೆಟ್ಟಿ |
| ತಂದೆಯ ಹೆಸರು | - | ಚಂದ್ರಶೇಖರ ಶೆಟ್ಟಿ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ವ್ಯಾಪಾರ |
| ವಿಳಾಸ | - | ಉಡುಪಿ |

ದಿನಾಂಕಃ 16.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:**

ನಾನು 2014 ನೇ ಸಾಲಿನಲ್ಲಿ ನಾನು ದಶರಥ ನಗರ ಮಣಿಪಾಲದಲ್ಲಿ ವ್ಯವಹಾರ ನಡೆಸಿಕೊಂಡು ವಾಸ ಮಾಡುತ್ತಿದ್ದೆ. 11 ವರ್ಷಗಳ ಹಿಂದೆ ಒಂದು ದಿನ ರಾತ್ರಿ 11-30 ಗಂಟೆಗೆ ನಾನು ನನ್ನ ಬೈಕ್ ನಲ್ಲಿ ನನ್ನ ವ್ಯಾಪಾರ ಮುಗಿಸಿ ರಾತ್ರಿ ದಶರಥ ನಗರದಲ್ಲಿರುವ ನನ್ನ ಮನೆಗೆ ಹೋಗುತ್ತಿದ್ದೆ. ನಾನು ವೇಣುಗೋಪಾಲ ದೇವಸ್ಥಾನದ ಬಳಿ ಹೋಗುತ್ತಿದ್ದಾಗ ಒಂದು ಎಸ್ಟೀಮ್ ಕಪ್ಪು ಬಣ್ಣದ ಕಾರು ಇದ್ದು ಸದ್ರಿ ಕಾರಿನ ಬಳಿ ಒಂದು ಹಸು ಮತ್ತು ಒಂದು ಕರು ಇತ್ತು. ಆ ಸ್ಥಳದಲ್ಲಿ ಇಬ್ಬರು ಇದ್ದು, ಕರುವನ್ನು ಕಾರಿನ ಒಳಗೆ ಹಾಕಿದ್ದು, ಹಸುವನ್ನು ಹಾಕಲು ಪ್ರಯತ್ನಿಸುತ್ತಿದ್ದರು. ಆಗ ನಾನು ನನ್ನ ಬೈಕಿನ ಹೆಡ್‌ಲೈಟನ್ನು ಆ ಕಡೆ ತಿರುಗಿಸಿ ಹಾರ್ನ್ ಹಾಕಿದಾಗ ಸದ್ರಿ ವ್ಯಕ್ತಿಗಳು ಹಸುವನ್ನು ಬಿಟ್ಟು ಸದ್ರಿ ಕಾರಿನಲ್ಲಿ ಅಲ್ಲಿಂದ ಪರಾರಿಯಾಗಿರುತ್ತಾರೆ. ಸದ್ರಿ ಕಾರಿನ ನೋಂದಣಿ ಸಂಖ್ಯೆ ನೋಡಿದ್ದು ಅದರ ಕೊನೆಯ ಸಂಖ್ಯೆ 8448 ಆಗಿತ್ತು. ನಾನು ಸದ್ರಿ ವಾಹನವನ್ನು ಹಿಂಬಾಲಿಸಿಕೊಂಡು ಹೋಗಿ ಮಣಿಪಾಲದ ಸಿಂಡಿಕೇಟ್ ಸರ್ಕಲ್ ಬಳಿ ಹೋದಾಗ ಅವರು ತಪ್ಪಿಸಿಕೊಂಡಿದ್ದು ತಕ್ಷಣ ನಾನು ಎಸ್.ಪಿ. ಕಚೇರಿಗೆ ಈ ಮಾಹಿತಿ ತಿಳಿಸಿರುತ್ತೇನೆ. ನಂತರ ವಿಚಾರ ತಿಳಿಯಲಾಗಿ, ಬೀಡಿನಗುಡ್ಡೆ ಮುಖಾಂತರ ಸದ್ರಿ ವಾಹನ ಡಯಾನಾ ಸರ್ಕಲ್ ಬಳಿ ಹೋಯಿತು ಎಂದು ಗೊತ್ತಾಯಿತು. ಸದ್ರಿ ವ್ಯಕ್ತಿಗಳನ್ನು ನನಗೆ ಈಗ

ನೋಡಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಘಟನೆ ನಂತರ ಸದ್ರಿ ವ್ಯಕ್ತಿಗಳನ್ನು ನಾನು ಎಲ್ಲಿಯೂ ನೋಡಿ ಗುರುತಿಸಿರುವುದಿಲ್ಲ. ನಾನು ಸದ್ರಿ ವ್ಯಕ್ತಿಗಳನ್ನು ಠಾಣೆಯಲ್ಲಿ ನೋಡಿ ಗುರುತಿಸಿ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಕಾರನ್ನು ನೋಡಿದರೆ ಗುರುತಿಸುತ್ತೇನೆ. ಕಡತದಲ್ಲಿ ಕಾರಿನ ಭಾವ ಚಿತ್ರ ಇಲ್ಲದೇ ಇರುವ ಕಾರಣ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.